ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300
ಫ್ಯಾಕ್ಸ್: 080–23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: K3/ಆ.ವಿ.ಪ್ರ.ಪ/62/2020–21 ದಿನಾಂಕ: 16.07.2021

## ಸುತ್ತೋಲೆ

ವಿಷಯ: 2021–22 ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿಯ ದಾಖಲಾತಿಗಾಗಿ **ದಿನಾಂಕ: 27.07.2021 ರಂದು** ನಡೆಸುವ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ:
1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಕಛೇರಿ ಸುತ್ತೋಲೆ ಸಂಖ್ಯೆ: ಸಶಿಕ/ಆ.ವಿ/6ನೇ ತ.ದಾ/2021–22/, ದಿನಾಂಕ: 22.01.2021
2. ಈ ಕಛೇರಿ ಸುತ್ತೋಲೆ ಸಮಸಂಖ್ಯೆ, ದಿನಾಂಕ: 03.04.2021
3. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 20.04.2021
4. ಸಭಾ ನಡಾವಳಿ ಸಂಖ್ಯೆ: K3/ಆ.ವಿ.ಪ್ರ.ಪ/62/2020–21, ದಿನಾಂಕ: 29.06.2021
5. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ: ಸ.ಶಿ.ಕ/ಆವಿ/6ನೇ ತರಗತಿ ದಾ./2021–22, ದಿನಾಂಕ: 14.07.2021

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2021–22 ನೇ ಸಾಲಿಗೆ ಆದರ್ಶ ವಿದ್ಯಾಲಯಗಳಿಗೆ 6ನೇ ತರಗತಿಯ ದಾಖಲಾತಿಗಾಗಿ ಪ್ರವೇಶ ಪರೀಕ್ಷೆಯನ್ನು ಉಲ್ಲೇಖ (1) ರನ್ವಯ ದಿನಾಂಕ: 25.04.2021 ರಂದು ನಿಗದಿಯಾಗಿತ್ತು. ಈ ಸಂಬಂಧ ಉಲ್ಲೇಖ (2) ರ ಸುತ್ತೋಲೆಯಲ್ಲಿ ವಿವಿಧ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ತಿಳಿಸಲಾಗಿತ್ತು. ಕೋವಿಡ್–19 ವ್ಯಾಪಕವಾಗಿ ಉಲ್ಬಣವಾಗಿದ್ದ ಹಿನ್ನೆಲೆಯಲ್ಲಿ ಉಲ್ಲೇಖ (3) ರಂತೆ ಪರೀಕ್ಷೆಯನ್ನು ಮುಂದೂಡಲಾಗಿತ್ತು.

ಸದರಿ ಪ್ರವೇಶ ಪರೀಕ್ಷೆಯನ್ನು ಉಲ್ಲೇಖ (4) ರ ಸಭಾ ನಡಾವಳಿ ಮತ್ತು (5) ರಲ್ಲಿ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರು ಆದೇಶಿಸಿರುವಂತೆ ಅಗತ್ಯ ಮುನ್ನೆಚ್ಚರಿಕೆಗಳೊಂದಿಗೆ **ದಿನಾಂಕ: 27.07.2021 ಮಂಗಳವಾರು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ** ನಡೆಸಲು ತೀರ್ಮಾನಿಸಲಾಗಿದೆ. ಹಾಗಾಗಿ **ಉಲ್ಲೇಖ (2) ರ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳ ಜೊತೆಗೆ ಹೆಚ್ಚುವರಿಯಾಗಿ ಈ ಕೆಳಕಂಡ ಅಂಶಗಳನ್ನು ಕೂಡ ಕಡ್ಡಾಯವಾಗಿ ಅಳವಡಿಸಿಕೊಂಡು ಪರೀಕ್ಷಾ ಕರ್ತವ್ಯ ನಿರ್ವಹಿಸುವುದು.**

- ಪರೀಕ್ಷಾ ಕೇಂದ್ರದ ಪ್ರತಿ ಕೊಠಡಿಗೆ 20 ವಿದ್ಯಾರ್ಥಿಗಳಿಗೆ ಬದಲಾಗಿ ಕೋವಿಡ್–19 ರ ಹಿನ್ನೆಲೆಯಲ್ಲಿ **10 ವಿದ್ಯಾರ್ಥಿಗಳನ್ನು** ನಿಗದಿಪಡಿಸಲಾಗಿದೆ.
- ಈ ಹಿಂದೆ ಗುರುತಿಸಲಾಗಿದ್ದ ಮೂಲ ಪರೀಕ್ಷಾ ಕೇಂದ್ರದ ಸಮೀಪದಲ್ಲಿ ಮತ್ತೊಂದು Block ಪರೀಕ್ಷಾ ಕೇಂದ್ರವನ್ನು ಗುರುತಿಸಿದ್ದು, ಮೂಲ ಪರೀಕ್ಷಾ ಕೇಂದ್ರದ ಪ್ರತಿ ಕೊಠಡಿಗೆ 10 ವಿದ್ಯಾರ್ಥಿಗಳಂತೆ ಲೆಕ್ಕಾಚಾರ ಮಾಡಿ ಉಳಿದ ವಿದ್ಯಾರ್ಥಿಗಳನ್ನು ಹೆಚ್ಚುವರಿ Block ಪರೀಕ್ಷಾ ಕೇಂದ್ರಕ್ಕೆ **ಪ್ರತಿ ಕೊಠಡಿಗೆ 10 ವಿದ್ಯಾರ್ಥಿಗಳಂತೆ ಹಂಚಿಕೆ ಮಾಡಲಾಗಿದೆ.**
- ಕ್ಷೇತ್ರಶಿಕ್ಷಣಾಧಿಕಾರಿಗಳು ಮೂಲ ಪರೀಕ್ಷಾ ಕೇಂದ್ರ ಮತ್ತು ಹೆಚ್ಚುವರಿ Block ಪರೀಕ್ಷಾ ಕೇಂದ್ರಗಳಿಗೆ ಪ್ರತಿ ಕೇಂದ್ರಕ್ಕೆ ಒಬ್ಬರಂತೆ ಮುಖ್ಯ ಅಧೀಕ್ಷಕರು, ಕಛೇರಿ ಸಹಾಯಕರು (FDA/SDA), ಕಸ್ಟೋಡಿಯನ್ ಕಂ ಜಾಗೃತ ದಳದ ಅಧಿಕಾರಿ ('ಬಿ' ವೃಂದದ ಅಧಿಕಾರಿ), Reliever ಹಾಗೂ ಪರೀಕ್ಷಾ ಕೇಂದ್ರದಲ್ಲಿ ಶಿಸ್ತು, ವಿದ್ಯಾರ್ಥಿಗಳ ನಡುವಿನ ಸಾಮಾಜಿಕ ಅಂತರ, ಇತ್ಯಾದಿ ಕಾರ್ಯಗಳ ಮೇಲ್ವಿಚಾರಣೆಗಾಗಿ ಒಬ್ಬರು ದೈಹಿಕ ಶಿಕ್ಷಣ ಶಿಕ್ಷಕರು, ಮತ್ತು ಕೊಠಡಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿ ಮೇಲ್ವಿಚಾರಕರುಗಳನ್ನು ನೇಮಿಸಿ, ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಂದ ಅನುಮೋದನೆ ಪಡೆಯುವುದು.
- ಪರೀಕ್ಷಾ ದಿನಕ್ಕೆ ಅಗತ್ಯವಿರುವ ಒಬ್ಬರು 'D' Group ನೌಕರ, ಒಬ್ಬರು Water Boy, ಒಬ್ಬರು ಆರೋಗ್ಯ ಇಲಾಖೆಯ ಆಶಾಕಾರ್ಯಕರ್ತೆಯರು ಹಾಗೂ ಒಬ್ಬರು ಪೊಲೀಸ್ ಪೇದೆಯನ್ನು ನೇಮಿಸಿಕೊಳ್ಳುವುದು.
- ಈ ಹಿಂದೆ ಸರಬರಾಜಾಗಿರುವ ನಾಮಿನಲ್ ರೋಲ್‌ಗಳಿಗೆ ಬದಲಾಗಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೂ ಪರಿಷ್ಕೃತ ನಾಮಿನಲ್ ರೋಲ್‌ಗಳನ್ನು (Block ಪರೀಕ್ಷಾ ಕೇಂದ್ರಗಳನ್ನು ಒಳಗೊಂಡಂತೆ) ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಈ

ಕಛೇರಿಯಿಂದ ಇ-ಮೇಲ್ ಮೂಲಕ ಕಳುಹಿಸಲಾಗುವುದು. ಸದರಿ ಪರಿಷ್ಕೃತ ನಾಮಿನಲ್ ರೋಲ್‌ಗಳನ್ನು ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರು ತಮ್ಮ ಹಂತದಲ್ಲಿಯೇ ಮುದ್ರಿಸಿ (Print out) ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ನೀಡಿ, ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸಕಾಲದಲ್ಲಿ ವಿತರಿಸುವಂತೆ ಕ್ರಮವಹಿಸುವುದು.

- ಈಗಾಗಲೇ ಮೂಲ ಪರೀಕ್ಷಾ ಕೇಂದ್ರಗಳಿಗೆ ಸರಬರಾಜು ಮಾಡಲಾಗಿರುವ ಪೂರ್ವಮುದ್ರಿತ ಒ.ಎಂ.ಆರ್‌ಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು **ಪರಿಷ್ಕೃತ ನಾಮಿನಲ್ ರೋಲ್‌ಗಳ ಅನುಸಾರ** ಮೂಲ ಮತ್ತು Block ಪರೀಕ್ಷಾ ಕೇಂದ್ರಗಳಿಗೆ ಮೂರು ದಿನ ಮುಂಚಿತವಾಗಿ ವಿತರಿಸಿ, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಪರಿಶೀಲಿಸಿಕೊಳ್ಳುವಂತೆ ತಿಳಿಸುವುದು.
- ಕ್ಷೇತ್ರಶಿಕ್ಷಣಾಧಿಕಾರಿಗಳು ವಿತರಿಸುವ ಪೂರ್ವಮುದ್ರಿತ ಒ.ಎಂ.ಆರ್, ಪರಿಷ್ಕೃತ ನಾಮಿನಲ್ ರೋಲ್‌ಗಳ ಅನುಸಾರ ಮೂಲ ಮತ್ತು Block ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ತಮ್ಮ ಪರೀಕ್ಷಾ ಕೇಂದ್ರಗಳಲ್ಲಿ ಕೊಠಡಿವಾರು ವಿದ್ಯಾರ್ಥಿಗಳನ್ನು ಹಂಚಿಕೆ ಮಾಡುವುದು.
- ಈಗಾಗಲೇ ಪ್ರಶ್ನೆಪತ್ರಿಕೆಗಳನ್ನು ಸಂಬಂಧಿಸಿದ ಜಿಲ್ಲಾ/ತಾಲ್ಲೂಕು ಖಜಾನೆಗಳಲ್ಲಿ ಠೇವಣಿಸಲಾಗಿದ್ದು, ಸದರಿ ಪ್ರಶ್ನೆಪತ್ರಿಕೆಗಳ ಬಂಡಲ್‌ಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಪರೀಕ್ಷಾ ದಿನದಂದು 1 ಗಂಟೆ 30 ನಿಮಿಷಗಳ ಮುಂಚಿತವಾಗಿ ಖಜಾನೆಯಿಂದ ಪಡೆದು ಮೂಲ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ತಲುಪಿಸುವುದು. ಮೂಲ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಹಾಗೂ ಕಸ್ಟೋಡಿಯನ್ ರವರು, ಹೆಚ್ಚುವರಿ Block ಪರೀಕ್ಷಾ ಕೇಂದ್ರದ ಕಸ್ಟೋಡಿಯನ್ ಹಾಗೂ Reliever ಸಮ್ಮುಖದಲ್ಲಿ, ಪರೀಕ್ಷೆ ಪ್ರಾರಂಭವಾಗುವ 45 ನಿಮಿಷಗಳ ಮುಂಚಿತವಾಗಿ ಪ್ರಶ್ನೆಪತ್ರಿಕೆ ಬಂಡಲ್ ತೆರೆದು (ಪ್ರಶ್ನೆಪತ್ರಿಕೆ ಪ್ಯಾಕೆಟ್‌ಗಳನ್ನು ತೆರೆಯುವಂತಿಲ್ಲ), ಪರಿಷ್ಕೃತ ನಾಮಿನಲ್ ರೋಲ್‌ನ ಅನುಸಾರ ಮೂಲ ಪರೀಕ್ಷಾ ಕೇಂದ್ರಕ್ಕೆ ಅಗತ್ಯವಿರುವ ಪ್ರಶ್ನೆಪತ್ರಿಕೆ ಪ್ಯಾಕೆಟ್‌ಗಳನ್ನು ಉಳಿಸಿಕೊಂಡು, Block ಪರೀಕ್ಷಾ ಕೇಂದ್ರಕ್ಕೆ ಅಗತ್ಯವಿರುವ ಪ್ರಶ್ನೆಪತ್ರಿಕೆ ಪ್ಯಾಕೆಟ್‌ಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿರಿಸಿ Block ಪರೀಕ್ಷಾ ಕೇಂದ್ರದ ಕಸ್ಟೋಡಿಯನ್ ಹಾಗೂ Reliever ಗೆ ಹಸ್ತಾಂತರಿಸುವುದು. ಈ ಬಗ್ಗೆ ಕ್ಷೇತ್ರಶಿಕ್ಷಣಾಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡುವುದು.
- ಹೆಚ್ಚುವರಿ Block ಪರೀಕ್ಷಾ ಕೇಂದ್ರದ ಕಸ್ಟೋಡಿಯನ್ ಹಾಗೂ Reliever ತಮ್ಮ Block ಪರೀಕ್ಷಾ ಕೇಂದ್ರಕ್ಕೆ ಹಂಚಿಕೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ್ರಶ್ನೆಪತ್ರಿಕೆಗಳಿರುವುದನ್ನು ಖಾತ್ರಿಪಡಿಸಿಕೊಂಡು ತಮ್ಮ ಪರೀಕ್ಷಾ ಕೇಂದ್ರಕ್ಕೆ ಸೂಕ್ತ ಭದ್ರತೆಯೊಂದಿಗೆ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ತಲುಪಿಸುವುದು. Block ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕಸ್ಟೋಡಿಯನ್ ನಿಂದ ಪಡೆದ ಪ್ರಶ್ನೆಪತ್ರಿಕೆಯ ಪ್ಯಾಕೆಟ್‌ಗಳು ತಮ್ಮ ಕೇಂದ್ರಕ್ಕೆ ಹಂಚಿಕೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇರುವುದನ್ನು ಖಾತ್ರಿ ಪಡಿಸಿಕೊಂಡು ಕೊಠಡಿ ಮೇಲ್ವಿಚಾರಕರಿಗೆ ಹಸ್ತಾಂತರಿಸಿ ನಿಗದಿತ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಗೆ ವಿತರಣೆಯಾಗುವಂತೆ ಕ್ರಮವಹಿಸುವುದು.
- ಒಂದು ಲಕೋಟೆಯಲ್ಲಿ 20 ಪ್ರಶ್ನೆಪತ್ರಿಕೆಗಳಂತೆ ಪ್ಯಾಕೆಟ್ ಮಾಡಲಾಗಿದ್ದು, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು 2 ಕೊಠಡಿಗಳಿಗೆ 1 ಪ್ಯಾಕೆಟ್‌ನಂತೆ ಪ್ರಶ್ನೆಪತ್ರಿಕೆಗಳ ಲಕೋಟೆಗಳನ್ನು ಕೊಠಡಿ ಮೇಲ್ವಿಚಾರಕರಿಗೆ ನೀಡುವುದು. ಪ್ರಶ್ನೆಪತ್ರಿಕೆ ಪ್ಯಾಕೆಟ್ ಅನ್ನು ಪರೀಕ್ಷಾ ಕೊಠಡಿಯಲ್ಲಿ ತೆರೆಯುವ ಸಂದರ್ಭದಲ್ಲಿ, ಎರಡೂ ಕೊಠಡಿಗಳ ಮೇಲ್ವಿಚಾರಕರು (ಉದಾ: ಕೊಠಡಿ ಸಂಖ್ಯೆ 1 ಮತ್ತು 2) ಹಾಜರಿದ್ದು, ಪ್ರಶ್ನೆಪತ್ರಿಕೆ ಪ್ಯಾಕೆಟ್ ಮೇಲೆ ವಿದ್ಯಾರ್ಥಿಗಳಿಂದ ಸಹಿ ಪಡೆದು, ಎರಡೂ ಕೊಠಡಿಗಳ ಮೇಲ್ವಿಚಾರಕರು ಸಹಿ ಮಾಡಿ, ವಿದ್ಯಾರ್ಥಿಗಳ ಸಮ್ಮುಖದಲ್ಲಿ ಪ್ಯಾಕೆಟ್ ತೆರೆದು ಕೊಠಡಿವಾರು ಹಂಚಿಕೆ ಮಾಡಿಕೊಂಡು ನಂತರ ಆಯಾ ಕೊಠಡಿಯಲ್ಲಿನ ವಿದ್ಯಾರ್ಥಿಗಳಿಗೆ ವಿತರಿಸುವುದು.
- ಪರೀಕ್ಷೆ ಮುಕ್ತಾಯವಾದ ಕೂಡಲೇ Block ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ತಮ್ಮ ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳ ಉತ್ತರಿಸಿದ ಒ.ಎಂ.ಆರ್‌ಗಳನ್ನು ನಾಮಿನಲ್ ರೋಲ್‌ನಲ್ಲಿರುವಂತೆ (ಗೈರು ಹಾಜರಾದ ವಿದ್ಯಾರ್ಥಿಗಳ ಒ.ಎಂ.ಆರ್‌ಗಳನ್ನು ಪ್ರತ್ಯೇಕಿಸದೆ) ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಗೆ ಅನುಗುಣವಾಗಿ ಜೋಡಿಸಿ, ಎಲ್ಲಾ ವಿದ್ಯಾರ್ಥಿಗಳ ಒ.ಎಂ.ಆರ್‌ಗಳಿರುವುದನ್ನು ಖಾತ್ರಿ ಪಡಿಸಿಕೊಂಡು, ಎಲ್ಲಾ ಒ.ಎಂ.ಆರ್‌ಗಳು ಮತ್ತು ವಿದ್ಯಾರ್ಥಿಗಳು ಸಹಿ ಮಾಡಿರುವ ನಾಮಿನಲ್ ರೋಲ್ ಅನ್ನು ಲಕೋಟೆಯಲ್ಲಿರಿಸಿ ಮೊಹರು ಮಾಡಿ ಮೂಲ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸುರಕ್ಷಿತವಾಗಿ ಹಸ್ತಾಂತರಿಸುವುದು.
- ಮೂಲ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ತಮ್ಮ ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳ ಉತ್ತರಿಸಿದ ಒ.ಎಂ.ಆರ್‌ಗಳ ಜೊತೆಯಲ್ಲಿಯೇ Block ಪರೀಕ್ಷಾ ಕೇಂದ್ರದ ಎಲ್ಲಾ ವಿದ್ಯಾರ್ಥಿಗಳ ಉತ್ತರಿಸಿದ ಒ.ಎಂ.ಆರ್‌ಗಳನ್ನು ನೋಂದಣಿ ಸಂಖ್ಯೆಗೆ ಅನುಗುಣವಾಗಿ ಜೋಡಿಸಿ, ಎಲ್ಲಾ **ಒ.ಎಂ.ಆರ್‌ಗಳು (ಮೂಲ ಕೇಂದ್ರ ಮತ್ತು Block ಕೇಂದ್ರ) ಮತ್ತು ವಿದ್ಯಾರ್ಥಿಗಳಿಂದ ಸಹಿ ಪಡೆದ ನಾಮಿನಲ್ ರೋಲ್ (ಮೂಲ ಕೇಂದ್ರ ಮತ್ತು Block ಕೇಂದ್ರ)** ಗಳನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯಿಂದ ನೀಡಿರುವ **Self Sticking adhesive tamper proof pre-printed cover ನಲ್ಲಿಟ್ಟು ಪ್ಯಾಕೆಟ್ ಮಾಡಿ, ಲಕೋಟೆಯ ಮೇಲೆ**

ಮುದ್ರಿತವಾಗಿರುವ ಎಲ್ಲಾ ಮಾಹಿತಿಗಳನ್ನು ಪರ್ಮನೆಂಟ್ ಮಾರ್ಕರ್ ಪೆನ್ನಿನಲ್ಲಿ ಭರ್ತಿ ಮಾಡುವುದು. ನಂತರ ಉಲ್ಲೇಖ (2) ರ ಸುತ್ತೋಲೆಯಲ್ಲಿ ತಿಳಿಸಿರುವ ಸೂಚನೆಗಳಂತೆ ಬಂಡಲ್ ಮಾಡುವುದು. ಬಂಡಲ್ ಮೇಲೆ ಅಗತ್ಯ ವಿವರಗಳನ್ನು ನಮೂದಿಸಿ ಎರಡೂ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಸಹಿ ಮತ್ತು ಮೊಹರು ಮಾಡಿದ ನಂತರ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಹಸ್ತಾಂತರಿಸುವುದು.

- ಕ್ಷೇತ್ರಶಿಕ್ಷಣಾಧಿಕಾರಿಗಳು ಪರೀಕ್ಷಾ ಕೇಂದ್ರವಾರು ಬಂಡಲ್‌ಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ, ಬ್ಲಾಕ್ ಹಂತದಲ್ಲಿಯೇ ಬಂಡಲ್ ತಯಾರಿಸಿ ಉಲ್ಲೇಖ (2) ರ ಸತ್ತೋಲೆಯಲ್ಲಿ ತಿಳಿಸಿರುವಂತೆ ಅಂಚೆ ಕಛೇರಿಯ ನಿಯಮಾನುಸಾರ ಅದೇ ದಿನ ಈ ಕಛೇರಿ ವಿಳಾಸಕ್ಕೆ Insured Register Parcel ಮಾಡವುದು. (Acknowledgement ಕಾಯ್ದಿರಿಸುವುದು) ಈ ಸಂಬಂಧ ತಮ್ಮ ಬ್ಲಾಕಿನಿಂದ ಪರೀಕ್ಷಾ ಕೇಂದ್ರವಾರು ಸಲ್ಲಿಸಿರುವ ಬಂಡಲ್‌ಗಳ ಮಾಹಿತಿಯನ್ನು ನೀಡುವುದು.

**ಕೋವಿಡ್–19 ರ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳು:–**

ಪ್ರಸ್ತುತ ಸಾಲಿನಲ್ಲಿ ಜುಲೈ ಮಾಹೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಎಸ್.ಒ.ಪಿ.ಯನ್ನು ಹೊರಡಿಸಲಾಗಿರುತ್ತದೆ. ಸದರಿ ಎಸ್.ಒ.ಪಿ.ಯಲ್ಲಿನ ಮಾರ್ಗಸೂಚಿಯಂತೆ ಆದರ್ಶ ವಿದ್ಯಾಲಯಗಳಲ್ಲಿನ 6ನೇ ತರಗತಿ ದಾಖಲಾತಿಗಾಗಿ ನಡೆಸುವ ಪ್ರವೇಶ ಪರೀಕ್ಷೆಯನ್ನು ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಸಮನ್ವಯ ಸಾಧಿಸಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ತಿಳಿಸಿದೆ.

**ಪರೀಕ್ಷಾ ಕೇಂದ್ರ :**

- ಪ್ರತಿ ಪರೀಕ್ಷಾ ಕೇಂದ್ರವನ್ನು (ಪರೀಕ್ಷಾ ಕೊಠಡಿ, ಶೌಚಾಲಯ ಇತ್ಯಾದಿ) ಪರೀಕ್ಷೆಗೆ ಒಂದು ದಿನ ಮೊದಲು 1% ಸೋಡಿಯಂ ಹೈಪೋಕ್ಲೋರೈಡ್ ಸೆಲ್ಯೂಷನ್ ಸೋಂಕು ನಿವಾರಕ ದ್ರಾವಣದಿಂದ ಹಾಗೂ ಪೀಠೋಪಕರಣಗಳನ್ನು ಮತ್ತು ಇನ್ನಿತರ ವಸ್ತುಗಳನ್ನು 2.5% ಲೈಸೋಲ್ ಅಥವಾ Hand Sanitizer ನಿಂದ ಸಂಬಂಧಪಟ್ಟ ನಗರ/ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮೂಲಕ ಸಿಂಪಡಿಸಿ ಸ್ವಚ್ಛಗೊಳಿಸುವುದು.
- ಪ್ರತಿ ಪರೀಕ್ಷಾ ಕೇಂದ್ರದಲ್ಲೂ, ಪರೀಕ್ಷಾ ಕೇಂದ್ರದ ಒಳಗೆ ಪ್ರವೇಶಿಸುವ ಪ್ರದೇಶದಲ್ಲಿ 6 ಅಡಿ ಅಥವಾ 2 ಮೀಟರ್ ದೈಹಿಕ ಅಂತರವನ್ನು ಕಾಯ್ದುಕೊಳ್ಳಲು ಸೂಕ್ತ ವ್ಯವಸ್ಥೆ ಕಲ್ಪಿಸುವುದು.
- ಪರೀಕ್ಷಾ ಕೇಂದ್ರದ ಪ್ರತಿ ಕೊಠಡಿಗೆ ಗರಿಷ್ಠ 10 ವಿದ್ಯಾರ್ಥಿಗಳಿಗೆ ಮಾತ್ರ ಆಸನ ವ್ಯವಸ್ಥೆ ಕಲ್ಪಿಸಿ, ಒಂದು ಡೆಸ್ಕ್‌ಗೆ ಒಂದು ವಿದ್ಯಾರ್ಥಿಯಂತೆ ಪ್ರತಿ ವಿದ್ಯಾರ್ಥಿಯ ನಡುವೆ 6 ಅಡಿ ಅಂತರವಿರುವಂತೆ ಕ್ರಮವಹಿಸುವುದು.
- ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಆಸನ ವ್ಯವಸ್ಥೆ ಬಗ್ಗೆ ಅಂದರೆ ಯಾವ ವಿದ್ಯಾರ್ಥಿ ಯಾವ ಕೊಠಡಿಯಲ್ಲಿ ಬರೆಯುತ್ತಾನೆ ಎಂಬುದನ್ನು ಮುಂಚಿತವಾಗಿ ವಿದ್ಯಾರ್ಥಿಗಳಿಗೆ ತಿಳಿಸುವ ವ್ಯವಸ್ಥೆ ಮಾಡುವುದು. ಈ ರೀತಿ ಮಾಡುವುದರಿಂದ ಸೂಚನಾ ಫಲಕದ ಮುಂದೆ ಗುಂಪುಗೂಡುವುದನ್ನು ತಡೆಗಟ್ಟಬಹುದು.
- ಪ್ರತಿ ವಿದ್ಯಾರ್ಥಿಯು ತಮ್ಮದೇ ಆದ ನೀರಿನ ಬಾಟಲಿಗಳನ್ನು ತರಲು ಅವಕಾಶ ನೀಡುವುದು. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಬೆಳಿಗ್ಗೆ ಸಾಕಷ್ಟು ಮುಂಚಿತವಾಗಿ ಬರುವುದರಿಂದ ಅಪೇಕ್ಷೆಪಟ್ಟಲ್ಲಿ ತಮ್ಮ ಮನೆಯಿಂದ ಆಹಾರದ ಡಬ್ಬಿಯನ್ನು ಒಯ್ಯಲು ಅನುವು ಮಾಡಿಕೊಡುವುದು.
- ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ ಕೊಠಡಿಯೊಳಗೆ ಮಳೆಯ ನೀರು ಎರಚುವಿಕೆಯಿಂದ ತೊಂದರೆ ಉಂಟಾಗುತ್ತಿದೆ ಎಂದು ಭಾವಿಸಿದ್ದಲ್ಲಿ ಪರೀಕ್ಷಾ ಕೇಂದ್ರಗಳ ಕೊಠಡಿ ಲಭ್ಯತೆಗನುಸಾರವಾಗಿ ಕೊಠಡಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದು. ಇದಕ್ಕೆ ಅನುಗುಣವಾಗಿ ಕೊಠಡಿ ಮೇಲ್ವಿಚಾರಕರನ್ನು ನಿಯೋಜಿಸಿಕೊಳ್ಳುವುದು.
- ಕೆಮ್ಮು/ನೆಗಡಿ/ಜ್ವರ ಮೊದಲಾದವುಗಳಿಂದ ಬಳಲುತ್ತಿರುವ/ಲಕ್ಷಣಗಳಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಕನಿಷ್ಠ ಎರಡು ಕೊಠಡಿಗಳನ್ನು **"ವಿಶೇಷ ಕೊಠಡಿ"**ಗಳೆಂದು ಹೆಸರಿಸಿ ಕಾಯ್ದಿರಿಸುವುದು.
- ಪರೀಕ್ಷಾ ಕೇಂದ್ರಕ್ಕೆ ಒಳಬರುವಾಗ ಮತ್ತು ಹೊರಗೆ ಹೋಗುವ ಸಮಯದಲ್ಲಿ ವಿದ್ಯಾರ್ಥಿಗಳು ಗುಂಪು–ಗುಂಪಾಗಿರಲು ಬಿಡಬಾರದು. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ದೈಹಿಕ ಅಂತರವನ್ನು ಕಾಯ್ದುಕೊಂಡು ಒಳಬರಲು ಮತು ್ತಹೊರ ಹೋಗಲು ಕ್ರಮವಹಿಸುವುದು.
- ಒಂದು ವೇಳೆ ವಿದ್ಯಾರ್ಥಿಯು ಸರಿಯಾದ ಅಳತೆಯುಳ್ಳ ಉತ್ತಮ ಬಟ್ಟೆ ಮಾಸ್ಕ್‌ನ್ನು ಧರಿಸಿ ಪರೀಕಾ ಕೇಂದ್ರಕ್ಕೆ ಹಾಜರಾದಲ್ಲಿ ಅನುಮತಿಸುವುದು. ಇಲ್ಲವಾದಲ್ಲಿ ಸರಿಯಾದ ಅಳತೆಯ ಉತ್ತಮ ಬಟ್ಟೆ ಮಾಸ್ಕ್‌ನ್ನು ಅಂತಹ ವಿದ್ಯಾರ್ಥಿಗಳಿಗೆ ನೀಡುವುದು. ಮುಂದುವರೆದು ಕೆಮ್ಮು/ನೆಗಡಿ/ಜ್ವರ ಮೊದಲಾದವುಗಳಿಂದ ಬಳಲುತ್ತಿರುವ/ಲಕ್ಷಣಗಳಿರುವ ವಿದ್ಯಾರ್ಥಿಗೆ ವೈದ್ಯಕೀಯ ತಪಾಸಣೆಗೆ ಕಳುಹಿಸುವ ಮುನ್ನಾ ಎನ್95 ಮಾಸ್ಕ್‌ನ್ನು ನೀಡುವುದು.
- ಪರೀಕ್ಷಾ ಕೇಂದ್ರದ ಎಲ್ಲಾ ವಿದ್ಯಾರ್ಥಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹ್ಯಾಂಡ್ ಸ್ಯಾನಿಟೈಸ್ ಮಾಡಿಕೊಳ್ಳುವುದು.

## ಪರೀಕ್ಷೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದು:

### ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವಾಗ:

- ಪರೀಕ್ಷಾ ಕೇಂದ್ರದ ಪ್ರವೇಶ ದ್ವಾರದಲ್ಲಿ ಚೌಕಗಳನ್ನು ಬರೆಯಬೇಕು ಮತ್ತು ವಿದ್ಯಾರ್ಥಿಗಳು ಅವುಗಳ ಮೂಲಕವೇ **"ಆರೋಗ್ಯ ತಪಾಸಣಾ ಕೌಂಟರ್"** ಕಡೆಗೆ ತೆರಳಬೇಕು. ಈ ಚೌಕಗಳ ನಡುವೆ ಕನಿಷ್ಠ ಆರು ಅಡಿ ಅಂತರವಿರಬೇಕು.
- ಜೂನ್/ಜುಲೈ 2020ರ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಮಂಡಳಿಯಿಂದ ನೀಡಲಾಗಿದ್ದ **"ಥರ್ಮಲ್ ಸ್ಕ್ಯಾನರ್"** ಗಳನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರು ತಮ್ಮ ಸುಪರ್ದಿಗೆ ಪಡೆದು ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಿಕೊಳ್ಳುವುದು. ಸದರಿ **"ಥರ್ಮಲ್ ಸ್ಕ್ಯಾನರ್"**ಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪರೀಕ್ಷೆ ನಡೆಯುವ 2–3 ದಿನಗಳ ಮುನ್ನ ಖಚಿತಪಡಿಸಿಕೊಳ್ಳುವುದು. ಇದಾದ ಬಳಿಕವೂ ಕೊರತೆ ಉಂಟಾದಲ್ಲಿ ಆರೋಗ್ಯ ಇಲಾಖೆಯವರಿಂದ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.
- ಪರೀಕ್ಷಾ ಕೇಂದ್ರದ ಪ್ರವೇಶ ದ್ವಾರದಲ್ಲಿ ವಿದ್ಯಾರ್ಥಿಗಳ ದಟ್ಟಣೆ ಇರಬಾರದು.
- ಪರೀಕ್ಷಾ ಕೇಂದ್ರದ ಒಳಗಡೆ ವಿದ್ಯಾರ್ಥಿ ಹಾಗೂ ಪರೀಕ್ಷಾ ಕೇಂದ್ರದ ಸಿಬ್ಬಂದಿಗಳನ್ನು ಹೊರತುಪಡಿಸಿ, ಪೋಷಕರಾಗಲಿ ಅಥವಾ ಯಾವುದೇ ಇತರ ವ್ಯಕ್ತಿಗಳ ಪ್ರವೇಶ ಕಡ್ಡಾಯವಾಗಿ ನಿರ್ಬಂಧಿಸುವುದು.

### ಪರೀಕ್ಷಾ ಕೊಠಡಿಯಲ್ಲಿ ಕುಳಿತಿರುವಾಗ:

- ಪ್ರತಿ ಡೆಸ್ಕ್‌ಗೆ ಒಬ್ಬ ವಿದ್ಯಾರ್ಥಿ ಮಾತ್ರ ಇರಬೇಕು.
- ಒಬ್ಬ ವಿದ್ಯಾರ್ಥಿಯಿಂದ ಮತ್ತೊಬ್ಬ ವಿದ್ಯಾರ್ಥಿಯ ನಡುವೆ ಸಾಧ್ಯವಾದಷ್ಟು 6 ಅಡಿ ಅಂತರವಿರಬೇಕು.

### ಆರೋಗ್ಯ ತಪಾಸಣಾ ಕೌಂಟರ್:

- ಪ್ರತಿ ಪರೀಕ್ಷಾ ಕೇಂದ್ರದಲ್ಲಿ **"ಆರೋಗ್ಯ ತಪಾಸಣಾ ಕೌಂಟರ್"**ನ್ನು ಪರೀಕ್ಷಾ ಕೇಂದ್ರದ ಮುಖ್ಯದ್ವಾರದಲ್ಲಿ ಸ್ಥಾಪಿಸುವುದು.
- ಪ್ರತಿ ಪರೀಕ್ಷಾ ಕೇಂದ್ರಕ್ಕೆ ಆರೋಗ್ಯ ಇಲಾಖೆಯಿಂದ ಇಬ್ಬರು ಅರೆ ವೈದ್ಯಕೀಯ/ಆಶಾ ಕಾರ್ಯಕರ್ತೆಯರು/ಇತರೆ ಸಿಬ್ಬಂದಿಯನ್ನು ಪಡೆಯುವುದು. ಸದರಿ ಸಿಬ್ಬಂದಿಯು ಪರೀಕ್ಷಾ ಕೇಂದ್ರಕ್ಕೆ **"ಥರ್ಮಲ್ ಸ್ಕ್ಯಾನರ್", "ಪಲ್ಸ್‌ಆಕ್ಸಿಮೀಟರ್"** ಹಾಗೂ **"ಪ್ರಥಮಚಿಕಿತ್ಸಾ ಪೆಟ್ಟಿಗೆ"** ಯೊಂದಿಗೆ ಹಾಜರಿರಲು ಸೂಚಿಸುವುದು.
- **"ಆರೋಗ್ಯ ತಪಾಸಣಾ ಕೌಂಟರ್"** ಪರೀಕ್ಷೆ ನಡೆಯುವ ದಿನದಂದು ಬೆಳಿಗ್ಗೆ 8.30ರಿಂದ ಪರೀಕ್ಷೆ ನಡೆಯುವ ಅವಧಿಯವರೆಗೂ ಕಾರ್ಯನಿರ್ವಹಿಸಬೇಕು.
- ಪರೀಕ್ಷಾ ಕಾರ್ಯದಲ್ಲಿ ತೊಡಗಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕಡ್ಡಾಯವಾಗಿ **"ಆರೋಗ್ಯ ತಪಾಸಣಾ ಕೌಂಟರ್"** ಮೂಲಕ ತಪಾಸಣೆಗೆ ಒಳಪಡಿಸಿ ಪರೀಕ್ಷಾ ಕೇಂದ್ರದೊಳಗೆ ಹೋಗಲು ಅನುಮತಿಸಬೇಕು.
- ಪರೀಕ್ಷಾ ಕೇಂದ್ರಕ್ಕೆ ಆರೋಗ್ಯ ಇಲಾಖೆಯಿಂದ ನಿಯೋಜಿಸಿರುವ ಅರೆ ವೈದ್ಯಕೀಯ ಸಿಬ್ಬಂದಿಯು ಎಲ್ಲಾ ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸುವುದು.
- ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಸುಸ್ಥಿತಿಯಲ್ಲಿರುವ **"ಪಲ್ಸ್ ಆಕ್ಸಿಮೀಟರ್"** ನ್ನು ಹೊಂದಿರಬೇಕು ಮತ್ತು ಕೆಮ್ಮು/ನೆಗಡಿ/ಜ್ವರ ಮೊದಲಾದವುಗಳಿಂದ ಬಳಲುತ್ತಿರುವ/ಲಕ್ಷಣವಿರುವ ವಿದ್ಯಾರ್ಥಿಗಳ oxygen saturation ನ್ನು ಪರಿಶೀಲಿಸಬೇಕು (>94%).
- Oxygen saturation level 94% ಗಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಮುಂದಿನ ವೈದ್ಯಕೀಯ ಚಿಕಿತ್ಸೆಗಾಗಿ ಕಳುಹಿಸುವುದು.
- ಒಂದು ವೇಳೆ ಯಾವುದಾದರೂ ವಿದ್ಯಾರ್ಥಿಯು ಕೆಮ್ಮು/ನೆಗಡಿ/ಜ್ವರ ಮೊದಲಾದವುಗಳಿಂದ ಬಳಲುತ್ತಿದ್ದಲ್ಲಿ, ಪಲ್ಸ್ ಆಕ್ಸಿಮೀಟರ್ ನಿಂದ ಪರೀಕ್ಷಿಸಿ oxygen saturation level 94% ಗಿಂತ ಕಡಿಮೆ ಇದ್ದಲ್ಲಿ **"ವಿಶೇಷ ಕೊಠಡಿ"**ಯಲ್ಲಿ ಕೂರಿಸಿ ಪರೀಕ್ಷೆ ನಡೆಸಬೇಕು.
- ಪರೀಕ್ಷಾ ಕೇಂದ್ರದೊಳಗೆ ಹೋಗುವ ಮುನ್ನ ಪ್ರತಿ ವಿದ್ಯಾರ್ಥಿಯು ಮಾಸ್ಕ್‌ಗಳನ್ನು ಧರಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು. ಒಂದು ವೇಳೆ ಧರಿಸಿರದಿದ್ದರೆ **"ಆರೋಗ್ಯ ತಪಾಸಣಾ ಕೌಂಟರ್"**ನಲ್ಲಿ ಮಾಸ್ಕ್‌ಗಳನ್ನು ನೀಡುವುದು.
- ಪ್ರತಿ ಮಗುವೂ ತನ್ನ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳುವಂತೆ ನೋಡಿಕೊಳ್ಳುವುದು.

- ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸುವ ಪ್ರತಿಯೊಬ್ಬ ಅಧಿಕೃತ ವ್ಯಕ್ತಿಯನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ, ಕೈಗಳನ್ನು ಸ್ಯಾನಿಟೈಸ್ ಮಾಡಿ, ಮತ್ತು ಮಾಸ್ಕ್‌ಗಳನ್ನು ಧರಿಸಿರುವ ಬಗ್ಗೆ ಖಾತರಿಪಡಿಸಿಕೊಂಡ ನಂತರವೇ ಪ್ರವೇಶಕ್ಕೆ ಅನುಮತಿಸುವುದು.
- ಆರೋಗ್ಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಪ್ರತಿ ತಾಲ್ಲೋಕಿಗೊಂದು **"ತುರ್ತು ಚಿಕಿತ್ಸಾ ವಾಹನ"**ವನ್ನು ಪರೀಕ್ಷಾ ಮಕ್ಕಳಿಗಾಗಿ ಮೀಸಲಿಡುವುದು.
- ಸಾಮಾನ್ಯ ರೋಗಲಕ್ಷಣಗಳಿರುವ ಮಕ್ಕಳಿಗೆ ಪರೀಕ್ಷೆ ಮುಗಿದ ನಂತರ ವೈದ್ಯಕೀಯ ತಪಾಸಣೆಗೆ ಮತ್ತು ಚಿಕಿತ್ಸೆಗೆ ಕಳುಹಿಸುವುದು.

**ಪರೀಕ್ಷಾ ಕೇಂದ್ರದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್.ಒ.ಪಿ)**

- ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಯಾವುದೇ ಸಿಬ್ಬಂದಿಗೆ ರೋಗ ಲಕ್ಷಣಗಳಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು.
- ಮುಖ್ಯ ಅಧೀಕ್ಷಕರು ಪರೀಕ್ಷೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಎಲ್ಲಾ ಸಿಬ್ಬಂದಿಗಳು ದೈಹಿಕ ಅಂತರವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು.
- ಪರೀಕ್ಷಾ ಕಾರ್ಯಕ್ಕಾಗಿ ನಿಯೋಜಿಸಲಾದ ಎಲ್ಲಾ ಸಿಬ್ಬಂದಿಗಳು ಪರೀಕ್ಷೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ನಿಯಮಿತವಾಗಿ, ವಿಶೇಷವಾಗಿ ಪ್ರಶ್ನೆಪತ್ರಿಕೆಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ಬಳಸುವಾಗ ತಮ್ಮ ಕೈಗಳನ್ನು ಸ್ಯಾನಿಟೈಸ್‌ಗೊಳಿಸಬೇಕು.
- ಶೌಚಾಲಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೈ ತೊಳೆಯಲು ನೀರು ಮತ್ತು ಸಾಬೂನು ಹಾಗೂ ಲಿಕ್ವಿಡ್ ಸೋಪ್ ಲಭ್ಯವಾಗುವಂತೆ ಮುಖ್ಯ ಅಧೀಕ್ಷಕರು ನೋಡಿಕೊಳ್ಳುವುದು.
- ಪರೀಕ್ಷಾ ಕೇಂದ್ರದ ಯಾವುದೇ ಅಧಿಕಾರಿಗಳು/ಸಿಬ್ಬಂದಿ ಯಾವುದೇ ಮಕ್ಕಳೊಂದಿಗೆ ನಿಕಟ ಸಂಪರ್ಕಕ್ಕೆ ಬರಬಾರದು.
- ಕೊಠಡಿ ಮೇಲ್ವಿಚಾರಕರು ತಮ್ಮ ಮೇಜಿನ ಮೇಲೆ ಸ್ಯಾನಿಟೈಸರ್ ಹೊಂದಿರಬೇಕು ಹಾಗೂ ಪ್ರಶ್ನೆಪತ್ರಿಕೆಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ತೆರೆಯುವ ಮತ್ತು ವಿತರಿಸುವ ಮೊದಲು ಅದನ್ನು ಬಳಸಬೇಕು. ಅಲ್ಲದೇ ಪರೀಕ್ಷೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಅರ್ಧಗಂಟೆಗೊಮ್ಮೆ ಅಥವಾ ಯಾವುದೇ ವಸ್ತುಗಳ ಮೇಲ್ಮೈಯನ್ನು ಸ್ಪರ್ಶಿಸಿದಾಗ ಕೈಗಳನ್ನು ಪದೇ ಪದೇ ಸ್ಯಾನಿಟೈಸ್‌ಗೊಳಿಸಿಕೊಳ್ಳಬೇಕು.
- ಪರೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳುವ ಎಲ್ಲಾ ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಯವರು ಎನ್95 ಮಾಸ್ಕ್ ಜೊತೆಗೆ ಅಗತ್ಯವೆನಿಸಿದಲ್ಲಿ ಫೇಸ್ ಶೀಲ್ಡ್ (Face shield) ನ್ನೂ ಬಳಸಬೇಕು.
- ಪರೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳುವ ಎಲ್ಲಾ ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಯವರು ಕನಿಷ್ಠ ಒಂದು ಡೋಸನ್ನಾದರು ಕೋವಿಡ್-19 ಲಸಿಕೆಯನ್ನು ಪಡೆದಿರಬೇಕು.

**ಕೋವಿಡ್ ಪಾಸಿಟಿವ್ ಆಗಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳು:-**

ಸಾಂಕ್ರಾಮಿಕ ಕೋವಿಡ್-19 ಪಾಸಿಟಿವ್ ಆಗಿರುವ ಯಾವುದೇ ವಿದ್ಯಾರ್ಥಿ ಪರೀಕ್ಷೆಗೆ ಹಾಜರಾಗುವುದರಿಂದ ನಿರಾಕರಿಸಲ್ಪಡಬಾರದು. ಈ ಕೆಳಗಿನ ಮಾರ್ಗಸೂಚಿಗಳನ್ನು ಸ್ಥಳೀಯ ಆರೋಗ್ಯ ಅಧಿಕಾರಿಗಳ ಸಮನ್ವಯದೊಂದಿಗೆ ಜಾರಿಗೊಳಿಸತಕ್ಕದ್ದು.

- ಪ್ರತಿ ತಾಲ್ಲೂಕಿಗೆ ಒಂದು ಕೋವಿಡ್ ಕೇರ್ ಸೆಂಟರ್‌ನ್ನು ಗುರುತಿಸುವುದು.
- ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಪರ್ಕದಲ್ಲಿದ್ದು, ಕೋವಿಡ್ ಪಾಸಿಟಿವ್ ಎಂದು ಗುರುತಿಸಲ್ಪಟ್ಟ ವಿದ್ಯಾರ್ಥಿಗಳ ಮಾಹಿತಿಯನ್ನು ಪಡೆಯುವುದು.
- ಕೋವಿಡ್ ಪಾಸಿಟಿವ್ ಎಂದು ಗುರುತಿಸಲ್ಪಟ್ಟ ವಿದ್ಯಾರ್ಥಿಗಳನ್ನು ಕೋವಿಡ್‌ಕೇರ್ ಸೆಂಟರ್‌ನಲ್ಲಿಯೇ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡತಕ್ಕದ್ದು.
- ಯಾವುದೇ ವಿದ್ಯಾರ್ಥಿಗೆ ಕೋವಿಡ್ ಪಾಸಿಟಿವ್ ಇದ್ದು, ಮನೆಯಲ್ಲಿಯೇ ಐಸೋಲೇಷನ್‌ನಲ್ಲಿದ್ದು, ಪರೀಕ್ಷೆ ಬರೆಯಲು ಅಪೇಕ್ಷಿಸಿದಲ್ಲಿ, ವಿದ್ಯಾರ್ಥಿಯ ಆರೋಗ್ಯ ಸುಸ್ಥಿತಿಯಲ್ಲಿದೆಯೆಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ, ಅಂತಹ ವಿದ್ಯಾರ್ಥಿಗೆ ಹತ್ತಿರದ ಕೋವಿಡ್ ಕೇರ್ ಸೆಂಟರ್‌ನಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವುದು.
- ಕೋವಿಡ್ ಕೇರ್ ಸಂಟರ್‌ನಲ್ಲಿ ಒಂದು ಆಂಬುಲೆನ್ಸ್ ವಾಹನ ಕಾಯ್ದಿರಿಸುವುದು ಮತ್ತು ಆಂಬುಲೆನ್ಸ್ ವಾಹನದೊಂದಿಗೆ ಒಂದು ವೈದ್ಯಕೀಯ ತಂಡ ಇರತಕ್ಕದ್ದು.

## ಪರೀಕ್ಷಾ ಕೇಂದ್ರ :

- ಕೋವಿಡ್ ಪಾಸಿಟಿವ್ ಆಗಿರುವ ವಿದ್ಯಾರ್ಥಿಯನ್ನು ಆಯಾ ತಾಲ್ಲೂಕು ಕೋವಿಡ್ ಕೇರ್ ಸೆಂಟರ್‌ನಲ್ಲಿ ಪರೀಕ್ಷೆಯನ್ನು ಬರೆಯಲು ವ್ಯವಸ್ಥೆ ಮಾಡುವುದು.
- ಪ್ರತಿ ತಾಲ್ಲೂಕು ಕೇಂದ್ರಕ್ಕೆ ಒಂದು ಕೋವಿಡ್ ಕೇರ್ ಸೆಂಟರ್‌ನ್ನು ಗುರುತಿಸಿಕೊಳ್ಳುವುದು.
- ಪರೀಕ್ಷಾ ಕೊಠಡಿಯಲ್ಲಿ ಸ್ವಾಭಾವಿಕ ವಾತಾಯನ ವ್ಯವಸ್ಥೆ ಇರತಕ್ಕದ್ದು.
- ಪ್ರವೇಶ ದ್ವಾರದಲ್ಲಿ ಮತ್ತು ಸೂಕ್ತ ಸ್ಥಳಗಳಲ್ಲಿ ಹ್ಯಾಂಡ್ ಸ್ಯಾನಿಟೈಸರ್‌ಗಳು ಲಭ್ಯವಿರತಕ್ಕದ್ದು.
- ನೀರು ಕುಡಿಯಲು ಬಳಸಿ ಬಿಸಾಡಬಹುದಾದ ಲೋಟಗಳು ಲಭ್ಯವಿರತಕ್ಕದ್ದು.
- ಎಲ್ಲಾ ಸಮಯಗಳಲ್ಲೂ 6 ಅಡಿಗಳ ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದು. ವಿದ್ಯಾರ್ಥಿಗಳ ನಡುವೆ 6 ಅಡಿಗಳ ಅಂತರವಿರುವಂತೆ ಆಸನ ವ್ಯವಸ್ಥೆ ಮಾಡತಕ್ಕದ್ದು.
- ಎಲ್ಲಾ ಶೌಚಾಲಯಗಳಲ್ಲೂ ಕೈ ತೊಳೆಯಲು ಲಿಕ್ವಿಡ್ ಸೋಪನ್ನು ಒದಗಿಸತಕ್ಕದ್ದು.
- ಸಾಮಾನ್ಯ ಘನ ತ್ಯಾಜ್ಯವನ್ನು ಯಾವುದೇ ಸಾಮಾನ್ಯ ತ್ಯಾಜ್ಯದಂತೆ ವಿಲೇವಾರಿ ಮಾಡಬಹುದು. ಉತ್ಪತ್ತಿಯಾದ ತ್ಯಾಜ್ಯ (ಬಳಸಿದ ಮುಖಗವಸುಗಳು, ಕನ್ನಡಕಗಳು, ಕ್ಯಾಪ್‌ಗಳು, ಗೌನ್‌ಗಳು. ಇತ್ಯಾದಿ) ಗಳನ್ನು ಒಂದು ಪ್ರತ್ಯೇಕ ಹಳದಿ ಕವರ್‌ನಲ್ಲಿ ಹಾಕಿ ಅದನ್ನು ಸಾಮಾನ್ಯ ಬಯೋಮೆಡಿಕಲ್ ತ್ಯಾಜ್ಯ ನಿರ್ವಹಣಾ ಸೌಲಭ್ಯದವರಿಗೆ (CBWTF) ಒಪ್ಪಿಸತಕ್ಕದ್ದು. (1% ಸೋಡಿಯಂ ಹೈಪೊಕ್ಲೋರೈಟ್ ಸೆಲ್ಯೂಷನ್ ಸಿಂಪಡಿಸುವುದು)

## ವಿದ್ಯಾರ್ಥಿ:

- ವಿದ್ಯಾರ್ಥಿಯು ಕೋವಿಡ್–19ರ ಪಾಸಿಟಿವ್ ಪರಿಸ್ಥಿತಿಯ ಬಗ್ಗೆ ಪರೀಕ್ಷಾ ಪ್ರಾಧಿಕಾರಕ್ಕೆ /ಅಧಿಕಾರಿಗಳಿಗೆ ಅಗತ್ಯವಿರುವ ವಿಶೇಷ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲು ಸಾಕಷ್ಟು ಮೊದಲೇ ತಿಳಿಸತಕ್ಕದ್ದು.
- ವಿದ್ಯಾರ್ಥಿಯು ತಾನು ಪರೀಕ್ಷೆ ಬರೆಯಲು ಆತನ/ಆಕೆಯ ಆರೋಗ್ಯ ಸುಸ್ಥಿತಿಯಲ್ಲಿದೆಯೆಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು ಒದಗಿಸತಕ್ಕದ್ದು.
- ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಳ್ಳಲು ಅವರತಂದೆ/ತಾಯಿ/ಪೋಷಕರು ಒಂದು "ಅಪಾಯ ಒಪ್ಪಿಗೆ" ಪತ್ರವನ್ನು ನೀಡತಕ್ಕದ್ದು.
- ವಿದ್ಯಾರ್ಥಿಯು ಕೋವಿಡ್ ಕೇರ್ ಸೆಂಟರ್‌ಗೆ ಸಂಚರಿಸಲು ಅದಕ್ಕಾಗಿ ನಿಗದಿಪಡಿಸಿದ 108 ಆಂಬುಲೆನ್ಸ್ ಅನ್ನೇ ಬಳಸತಕ್ಕದ್ದು.
- ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟಂತಹ ಕೋವಿಡ್ ಪಾಸಿಟಿವ್ ಇರುವ ವಿದ್ಯಾರ್ಥಿಯು ಎಲ್ಲಾ ಸಮಯದಲ್ಲೂ ಎನ್–95 ಮಾಸ್ಕ್‌ನ್ನು ಧರಿಸುವುದು ಕಡ್ಡಾಯವಾಗಿರುತ್ತದೆ.
- ಅಗತ್ಯ ಬಿದ್ದಾಗ ವಿದ್ಯಾರ್ಥಿಯು ಹ್ಯಾಂಡ್ ಸ್ಯಾನಿಟೈಸರ್ ಬಳಸತಕ್ಕದ್ದು.

## ಕೊಠಡಿ ಮೇಲ್ವಿಚಾರಕರು:

- ಕೋವಿಡ್ ಕೇರ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುವ ಆರೋಗ್ಯ ಕಾರ್ಯಕರ್ತರನ್ನು ಕೊಠಡಿ ಮೇಲ್ವಿಚಾರಕರಾಗಿ ನೇಮಿಸುವುದು ಹಾಗೂ ಅವರಿಗೆ ಪರೀಕ್ಷೆ ನಿರ್ವಹಣೆ ಬಗ್ಗೆ ಅಗತ್ಯ ಮಾಹಿತಿ ನೀಡುವುದು.
- ಆತ/ಆಕೆ ಎನ್–95 ಮುಖಗವಸು ಹಾಗೂ ಕೈಗವಸುಗಳನ್ನು ಧರಿಸತಕ್ಕದ್ದು.
- ಎಲ್ಲಾ ಸಮಯಗಳಲ್ಲೂ 6 ಅಡಿಗಳ ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದು.
- ವಿದ್ಯಾರ್ಥಿಯು ಆಸೀನರಾಗುವ ಮೊದಲೇ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಮೇಜಿನ ಮೇಲೆ ಇರಿಸತಕ್ಕದ್ದು.
- ವಿದ್ಯಾರ್ಥಿಗಳು ಸಹಿ ಮಾಡಲು ಹಾಜರಾತಿ/ಕೊಠಡಿ ಮೇಲ್ವಿಚಾರಕರ ದಿನಚರಿಯನ್ನಿಡಲು ಒಂದು ಪ್ರತ್ಯೇಕ ಮೇಜನ್ನು ನಿಗದಿಪಡಿಸತಕ್ಕದ್ದು.
- ಎಲ್ಲಾಉತ್ತರ ಪತ್ರಿಕೆಗಳಲ್ಲೂ ಪರೀಕ್ಷೆ ಪ್ರಾರಂಭವಾಗುವ ಮೊದಲೇ ಕೊಠಡಿ ಮೇಲ್ವಿಚಾರಕರು ಸಹಿ ಮಾಡತಕ್ಕದ್ದು.
- ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು (ಒ.ಎಂ.ಆರ್ ಶೀಟ್) ಹಾಕಲು ಒಂದು ಡ್ರಾಪ್ ಬಾಕ್ಸ್ ಇಡತಕ್ಕದ್ದು.
- ಪರೀಕ್ಷೆಯ ಅಂತ್ಯದಲ್ಲಿ, ಕೊಠಡಿ ಮೇಲ್ವಿಚಾರಕರು ಆ ಉತ್ತರ ಪತ್ರಿಕೆಗಳನ್ನು (ಒ.ಎಂ.ಆರ್ ಶೀಟ್) ಸೀಲ್ಡ್ ಬ್ಯಾಗ್/ ಕವರ್‌ಗೆ ಹಾಕತಕ್ಕದ್ದು.

- ವಿದ್ಯಾರ್ಥಿಯೊಂದಿಗೆ ಆಗಾಗ್ಗೆ ಸಂಭಾಷಣೆ ಮಾಡಬಾರದು.
- ಅಂತಹ ವಿದ್ಯಾರ್ಥಿಯು ಪರೀಕ್ಷೆ ಬರೆಯುವಂತಹ ಕೋವಿಡ್ ಕೇರ್ ಸೆಂಟರ್‌ನ ಕೊಠಡಿ ಮೇಲ್ವಿಚಾರಕರಾಗಿ ಆಸ್ಪತ್ರೆಯ ನರ್ಸ್/ಆರೋಗ್ಯ ಸಹಾಯಕರೇ ಕಡ್ಡಾಯವಾಗಿ ಕಾರ್ಯನಿರ್ವಹಿಸತಕ್ಕದ್ದು.
- ಕೋವಿಡ್ ಕೇರ್ ಸೆಂಟರ್‌ಗೆ ಒಬ್ಬರು ಪರೀಕ್ಷಾ ಸಹಾಯಕರನ್ನು ನೇಮಕ ಮಾಡುವುದು.

**ಕೋವಿಡ್ ಕೇರ್ ಸೆಂಟರ್‌ಗೆ ಪ್ರಶ್ನೆಪತ್ರಿಕೆ ಸರಬರಾಜಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಿದೆ.**

- ವಿದ್ಯಾರ್ಥಿಯ ಮೂಲ ಪರೀಕ್ಷಾ ಕೇಂದ್ರದಿಂದ (ಪ್ರವೇಶ ಪತ್ರದಲ್ಲಿದ್ದಂತೆ) ಆ ದಿನದ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಯನ್ನು(ಒ.ಎಂ.ಆರ್ ಶೀಟ್) ಸೂಕ್ತ ಭದ್ರತೆ ಮತ್ತು ಸುರಕ್ಷತೆಯೊಂದಿಗೆ ವಿದ್ಯಾರ್ಥಿಯು ಪರೀಕ್ಷೆ ಬರೆಯುವ ಕೋವಿಡ್ ಕೇರ್ ಸೆಂಟರ್‌ಗೆ ತಲುಪಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.
- ಪರೀಕ್ಷೆಯು ಪ್ರಾರಂಭವಾದ ಅರ್ಧಗಂಟೆ ನಂತರ ಪ್ರಶ್ನೆಪತ್ರಿಕೆಯನ್ನು ಕೋವಿಡ್ ಕೇರ್ ಸೆಂಟರ್‌ಗೆ ಸೂಕ್ತ ಭದ್ರತೆಯೊಂದಿಗೆ ತಲುಪಿಸುವುದು. ಹಾಗೂ ವಿದ್ಯಾರ್ಥಿಗೆ ಉತ್ತರ ಬರೆಯಲು ಅಷ್ಟು ಹೆಚ್ಚುವರಿ ಅವಧಿ ನೀಡುವುದು.
- ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಯನ್ನು (ಒ.ಎಂ.ಆರ್ ಶೀಟ್) ನಿಯಮಾನುಸಾರ ಬಂಡಲ್ ಮಾಡಿ, ಸ್ಯಾನಿಟೈಸ್ ಮಾಡಿಸಂಬಂಧಿಸಿದ ಪರೀಕ್ಷಾ ಕೇಂದ್ರಕ್ಕೆ ಸಕಾಲದಲ್ಲಿತಲುಪಿಸುವುದು.

**ವಿಶೇಷ ಸೂಚನೆ:**

ಪರೀಕ್ಷಾ ಪ್ರಕ್ರಿಯೆಯಲ್ಲಿ ಕಾರ್ಯನಿರ್ವಹಿಸುವ ಇಲಾಖೆಯ ಜಿಲ್ಲಾ, ತಾಲ್ಲೂಕು ಮತ್ತು ಪರೀಕ್ಷಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ಆಯಾ ಜಿಲ್ಲೆಯ ಉಪನಿರ್ದೇಶಕರು (ಅಭಿವೃದ್ಧಿ)/ಕ್ಷೇತ್ರಶಿಕ್ಷಣಾಧಿಕಾರಿಗಳು ಮೇಲ್ಕಂಡ ಎಸ್ ಒ ಪಿ ಯಲ್ಲಿ ವಿವರಿಸಿರುವ ಅಂಶಗಳ ಬಗ್ಗೆ ವಿವರವಾದ ತರಬೇತಿಯನ್ನು ಪರೀಕ್ಷಾ ಪೂರ್ವದಲ್ಲಿ ತಪ್ಪದೇ ನೀಡುವುದು ಹಾಗೂ ಪ್ರತಿ ಪರೀಕ್ಷಾ ಕೇಂದ್ರದಲ್ಲಿಯೂ ಸಹ ಎಸ್ ಒ ಪಿ ಯನ್ನು ಅನುಷ್ಠಾನಗೊಳಿಸಲು ಮಾಡಿಕೊಂಡಿರುವ ಸಿದ್ಧತೆಗಳನ್ನು ಪರಿಶೀಲಿಸಿ ಅನುಮೋದಿಸುವುದು.

ಆದರ್ಶ ವಿದ್ಯಾಲಯಗಳಲ್ಲಿನ 6ನೇ ತರಗತಿ ದಾಖಲಾತಿಗಾಗಿ **ದಿನಾಂಕ: 27.07.2021 ರಂದು** ಪ್ರವೇಶ ಪರೀಕ್ಷೆ ನಡೆಯುವ ಬಗ್ಗೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರ ಮೂಲಕ ಮಾಹಿತಿ ತಲುಪುವಂತೆ ಮಾಡಲು ಕ್ಷೇತ್ರಶಿಕ್ಷಣಾಧಿಕಾರಿಗಳು ಅಗತ್ಯ ಕ್ರಮವಹಿಸುವುದು ಹಾಗೂ ಸ್ಥಳೀಯ ದಿನಪತ್ರಿಕೆಗಳಲ್ಲಿ ಸುದ್ಧಿ ಪ್ರಕಟವಾಗುವಂತೆ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮವಹಿಸಲು ತಿಳಿಸಿದೆ.

ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಕ್ಷೇತ್ರಶಿಕ್ಷಣಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳು, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಕಸ್ಟೋಡಿಯನ್‌ಗಳು ಈ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳು ಹಾಗೂ ದಿನಾಂಕ: 03.04.2021 ರ ಈ ಕಛೇರಿಯ ಸುತ್ತೋಲೆಯಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸಿ ಹಾಗೂ ಕೋವಿಡ್-19 ಕ್ಕೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಪಾಲನೆ ಮಾಡಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ತಿಳಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ.

ಪ್ರತಿಯನ್ನು:-

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ ರವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆದರ್ಶ ಪ್ರವೇಶ ಪರೀಕ್ಷೆಯ ನೋಡಲ್ ಅಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ (ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ).
7. ಕಛೇರಿ ಪ್ರತಿ.